ಇಂದು ದಿ**: 12.12.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**.**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ವಿಚಾರಗಳು ಸತ್ಯ ಇರುತ್ತವೆ. ಪ್ರಮಾಣ ಪತ್ರದಲ್ಲಿ ಇರುವ ಸಹಿ ನನ್ನದೇ ಆಗಿರುತ್ತದೆ.

ಮುಂದುವರೆದ ಮುಖ್ಯ ವಿಚಾರಣೆ ವಾದಿಯ ಪರಃ ಶ್ರೀ ಎನ್**.**ಜಿ**.** ವಕೀಲರಿಂದ

ಸಾಕ್ಷಿ ನಿಪಿ: 2 ರಲ್ಲಿ ತಾನು ಸಾಕ್ಷಿದಾರನಾಗಿ ಸಹಿ ಮಾಡಿರುವುದಾಗಿ ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ಈಗಾಗಲೇ ನಿಪಿ: 2(ಜಿ) ಎಂದು ಗುರುತಿಸಲಾಗಿದೆ. ಸಾಕ್ಷಿ, ನಿಪಿ: 2 ರಲ್ಲಿ 1 ರಿಂದ 4 ನೇ ಪ್ರತಿವಾದಿಗಳು ಸಹಿ ಮಾಡಿರುತ್ತಾರೆ ಎಂದು ಸದರಿ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ: 2(ಎ) ಯಿಂದ 2(ಡಿ) ಎಂದು ಗುರುತಿಸಲಾಗಿದೆ. ಸಾಕ್ಷಿ ನಿಪಿ:2 ಕ್ಕೆ ಸಾಕ್ಷಿದಾರರಾಗಿ ಮಂಜುನಾಥ ಮತ್ತು ಸಿದ್ದೇಶ ಸಹಿ ಮಾಡಿರುತ್ತಾರೆ ಎಂದು ಸದರಿ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ: 2(ಈ) ಮತ್ತು 2(ಜಿ) ಎಂದು ಗುರುತಿಸಲಾಗಿದೆ. ಸಾಕ್ಷಿ: 02 ನ್ನು ಆರ್.ಜಿ. ಮಹಂತೇಶ ಬರೆದಿರುತ್ತಾರೆ ಎಂದು ಸದರಿಯವರ ಸಹಿಯನ್ನು ನೋಡಿ ಗುರುತಿಸಿದ್ದು, ಈಗಾಗಲೇ ನಿಪಿ: 2(ಹೆಚ್) ಎಂದು ಗುರುತಿಸಲಾಗಿದೆ.

ಪಾಟೀ ಸವಾಲು ಪ್ರತಿವಾದಿಗಳ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.